# ದಿವ್ಯಭಾವದಲ್ಲಿ ಸ್ವಾಮಿ ಬ್ರಹ್ಮಾನಂದರು

**ಸಂಗ್ರಹ: ಸ್ವಾಮಿ ಭಾಸ್ಕರಾನಂದ**

*ಅನುವಾದ : ಮಾತಾ ತ್ಯಾಗಮಯೀ*

### ಡಾ. ರತಿಕಾಂತ ಮಜುಂದಾರ್ ಅವರ ನೆನಪುಗಳು

೧೯೦೬ ನೇ ಇಸವಿಯಲ್ಲಿ ನಾನು ಭಾರತೀಯ ರೈಲ್ವೆಯಲ್ಲಿ ಕೆಲಸ ಮಾಡುತ್ತಿದ್ದೆ. ಆಗ ನಾನು ಪುರಿಯಲ್ಲಿ ಇದ್ದೆ. ಒಂದು ದಿನ ನಾಲ್ವರು ಧೀಮಂತ ಸಂನ್ಯಾಸಿಗಳು ರೈಲ್ವೆ ಸ್ಟೇಷನ್ನಿನ ಪ್ಲಾಟ್‌ಫಾರ್ಮ್ ಮೇಲೆ ಓಡಾಡುತ್ತಿರುವುದನ್ನು ನೋಡಿದೆನು. ಕುತೂಹಲದಿಂದ ನಾನು, ಅವರಲ್ಲೊಬ್ಬರನ್ನು ಏಕೆ ಓಡಾಡುತ್ತಿರುವುದಾಗಿ ಕೇಳಿದೆನು. "ಮದ್ರಾಸ್ ಮೇಲ್‌ನಿಂದ ಆಗಮಿಸುತ್ತಿರುವ ಸ್ವಾಮಿ ಅಭೇದಾನಂದರನ್ನು ಸ್ವಾಗತಿಸಲು ಬಂದಿದ್ದೇವೆ" ಎಂದವರು ಉತ್ತರಿಸಿದರು. ಮದ್ರಾಸ್ ಮೇಲ್ ಬರಲಿಕ್ಕೆ ಅಂದು ಒಂದು ಗಂಟೆ ತಡವಾಗುತ್ತದೆಂದು ನಾನು ಅವರಿಗೆ ತಿಳಿಸಿದೆನು. ಅವರನ್ನು ನನ್ನ ಕಾರಿನೊಳಗೆ ಬಂದು ಕುಳಿತುಕೊಳ್ಳುವಂತೆ ವಿನಂತಿಸಿಕೊಂಡೆನು. ಅವರೆಲ್ಲ ಬಂದು ಕುಳಿತುಕೊಂಡ ಮೇಲೆ ನಾನು ಯಾವ ಸಂನ್ಯಾಸಿಯೊಡನೆ ಮಾತನಾಡುತ್ತಿದ್ದೆನೊ ಅವರು ಸ್ವಾಮಿ ಬ್ರಹ್ಮಾನಂದಜಿಯವರೆಂದು ಗೊತ್ತಾಯಿತು. ಉಳಿದ ಮೂವರು ಸ್ವಾಮಿ ಶಿವಾನಂದಜಿ, ಸ್ವಾಮಿ ಅಖಂಡಾನಂದಜಿ ಮತ್ತು ಸ್ವಾಮಿ ಪ್ರೇಮಾನಂದಜಿ. ಕೆಲಹೊತ್ತು ಮಾತನಾಡಿದ ಮೇಲೆ ನಾನು ಅವರನ್ನು ಕೇಳಿದೆ, "ತಾವೆಲ್ಲ ಅದ್ವೈತಿಗಳಂತೆ ಕಾಣುತ್ತೀರಿ. ಹಾಗಿದ್ದಾಗ ನೀವು ಜಗನ್ನಾಥನ ಮರದ ವಿಗ್ರಹವನ್ನು ಏಕೆ ಪೂಜಿಸುತ್ತೀರಿ?" ಸ್ವಾಮಿ ಬ್ರಹ್ಮಾನಂದಜಿಯವರು ಉತ್ತರಿಸಿದರು, "ಅದನ್ನು ನಾವು ಬಲ್ಲೆವು, ಪ್ರಭು ಜಗನ್ನಾಥ ಕೂಡ ಸಚ್ಚಿದಾನಂದ ಬ್ರಹ್ಮವೇ ಆಗಿದ್ದಾನೆ." ಅವರ ನುಡಿಗಳು ನೇರವಾಗಿ ನನ್ನ ಹೃದಯಾಂತರಾಳವನ್ನು ಹೊಕ್ಕವು. ಬ್ರಾಹ್ಮಸಮಾಜದ ಸಂಪರ್ಕದಿಂದ, ಭಗವಂತ ವಿಗ್ರಹದಲ್ಲಿ ಇರಲಾರನು, ಭಗವಂತ ನಿರಾಕಾರ ಎಂಬ ಬೋಧನೆಗಳಿಂದ ನನ್ನ ವಿಚಾರಗಳು ಪ್ರಭಾವಿತವಾಗಿದ್ದವು. ಯಾವ ತರ್ಕವಾಗಲಿ, ವಿಚಾರವಾಗಲಿ ಈ ಹಿಂದೆ ನನ್ನ ದೃಷ್ಟಿಯನ್ನು ಬದಲಿಸಲು ಸಾಧ್ಯವಾಗಿರಲಿಲ್ಲ. ಆದರೆ, ಸ್ವಾಮಿ ಬ್ರಹ್ಮಾನಂದಜಿಯವರ ಮೇಲಿನ ಮಾತುಗಳನ್ನು ಒಮ್ಮೆ ಕೇಳುತ್ತಲೇ ನಾನು ಹೊಸ ಬೆಳಕನ್ನು ಕಂಡೆನು; ನನ್ನ ಮನಸ್ಸು ಅತುಲ ಸೌಂದರ್ಯನಿಧಿಯಾದ ಭಗವಂತನ ದಿವ್ಯಸ್ವರೂಪವನ್ನು ಚಿತ್ರಿಸಿಕೊಂಡಿತು, ಮಾತು ಮೂಕವಾಯಿತು, ಆ ಪ್ರಭುವಿನ ರೂಪವನ್ನು ಮನಸಾರೆ ಕಂಡು ಹೃದಯ ತುಂಬಿ ಬಂದಿತು. ಯಾವುದೇ ಪ್ರಶ್ನೆ ಕೇಳಲು, ವಾದ ಮಾಡಲು ನನಗೆ ಮನಸ್ಸಾಗಲಿಲ್ಲ. ಬ್ರಹ್ಮಜ್ಞಾನಿಯಾದವನ ನುಡಿಗಳು ನನ್ನ ಮನಸ್ಸಿನ ಮೇಲೆ ಬೀರಿದ ಪರಿಣಾಮ ಇಂಥದ್ದು.



### ಸ್ವಾಮಿ ಶ್ಯಾಮಾನಂದಜಿಯವರ ನೆನಪುಗಳು

೧೯೧೦ ನೇ ಇಸವಿಯಲ್ಲಿ ನಡೆದ ಘಟನೆ. ಸ್ವಾಮಿ ಬ್ರಹ್ಮಾನಂದಜಿಯವರು ಪ್ರತಿದಿನ ಬೆಳಿಗ್ಗೆ ಮೂರು ಗಂಟೆಗೆ ಏಳುತ್ತಿದ್ದರು. ಅವರ ಎದುರಿಗೆ ನೆಲದಲ್ಲಿ ನಾನು ಕುಳಿತುಕೊಳ್ಳುತ್ತಿದ್ದೆ. ಶ್ರೀಕೃಷ್ಣನ ಭಜನೆಯೊಂದನ್ನು ಹೇಳುವಂತೆ ನನಗೆ ಆದೇಶಿಸುತ್ತಿದ್ದರು:

**ಹರಿ ಹರಾಯ ನಮಃ ಕೃಷ್ಣ ಮಾಧವಾಯ ನಮಃ**
**ಯಾದವಾಯ ಮಾಧವಾಯ ಕೇಶವಾಯ ನಮಃ**
**ಗೋಪಾಲ ಗೋವಿಂದ ರಾಮ ಶ್ರೀಮಧುಸೂದನ**
**ಗಿರಿಧಾರಿ ಗೋಪಿನಾಥ ಮದನಮೋಹನ**

ಪೂಜ್ಯ ಸ್ವಾಮೀಜಿಯವರು ಅಮೆರಿಕದ ಪಶ್ಚಿಮ ವಾಷಿಂಗ್‌ಟನ್ ವೇದಾಂತ ಸೊಸೈಟಿಯ ಮುಖ್ಯಸ್ಥರು. ಇವರ 'ಸ್ವಾಮಿ ಬ್ರಹ್ಮಾನಂದರ ನೆನಪುಗಳು' ಎಂಬ ಆಂಗ್ಲ ಗ್ರಂಥದ ಕೆಲವು ಭಾಗಗಳನ್ನು ಅನುವಾದ ಮಾಡಿರುವ ಮಾತಾ ತ್ಯಾಗಮಯೀ ಬೆಂಗಳೂರಿನ ಭವತಾರಿಣಿ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಅವರು ಕಲಿಸಿಕೊಟ್ಟ ಧಾಟಿಯಲ್ಲಿ ನಾನು ಅದನ್ನು ಪುನರಾವರ್ತಿಸುತ್ತಿದ್ದೆ. ಭಜನೆ ಕೇಳುತ್ತ ಕೇಳುತ್ತ ಅವರ ಮನ ಅಂತರ್ಮುಖವಾಗುತ್ತಿತ್ತು; ಬಾಹ್ಯಪ್ರಜ್ಞೆ ಕಳಚಿಹೋಗುತ್ತಿತ್ತು. ನಾನು ನಾಮಾವಳಿಯನ್ನು ನಿಲ್ಲಿಸಿದರೆ ಭಾವಾವಸ್ಥೆಯಿಂದ ಹೊರಬಂದು, "ಮುಂದುವರಿಸು, ನಿಲ್ಲಿಸಬೇಡ" ಎನ್ನುತ್ತಿದ್ದರು. ನಾನು ನಿಲ್ಲಿಸದೆ ಭಜನೆ ಮುಂದುವರಿಸುತ್ತಿದ್ದೆ. ಕೆಲವೊಮ್ಮೆ ಆಲಿಸುತ್ತ ಆಲಿಸುತ್ತ ಭಾವಾವಸ್ಥೆಗೇರಿ ಅವರ ಉಸಿರೂ ನಿಂತು ಹೋದಂತೆ ಭಾಸವಾಗುತ್ತಿತ್ತು. ಯಾವಾಗಲೋ ಒಮ್ಮೆ ಸ್ವಾಮಿ ಪ್ರೇಮಾನಂದಜಿಯವರು ಸದ್ದಿಲ್ಲದೆ ಕೋಣೆಯನ್ನು ಪ್ರವೇಶಿಸಿ, ಅವರ ಪಾದಗಳಿಗೆ ನಮಸ್ಕರಿಸುತ್ತಿದ್ದರು.

ಸ್ವಾಮಿ ಬ್ರಹ್ಮಾನಂದಜಿಯವರು ಹೇಳುತ್ತಿದ್ದರು, "ಭಗವಂತನ ನಾಮಸ್ಮರಣೆಯಲ್ಲಿ ಮತ್ತರಾಗಿರಿ. ನಿಮ್ಮ ಸಾಧನೆಯಾಗಲಿ, ಜಪವಾಗಲಿ, ಧ್ಯಾನವಾಗಲಿ ಅಥವಾ ಮತ್ತೇನೇ ಆಗಿರಲಿ, ಅದು ನಿಮ್ಮ ಮತ್ತು ಅವನ ನಡುವಿನ ಸಂಬಂಧ ಮಾತ್ರವಾಗಿರಬೇಕು. ನಿಮ್ಮ ಸಾಧನೆಯಲ್ಲಿ ಮುಳುಗಿಬಿಡಿ."

### ಸ್ವಾಮಿ ವರದಾನಂದಜಿಯವರ ನೆನಪುಗಳು

ಸ್ವಾಮಿ ಬ್ರಹ್ಮಾನಂದಜಿಯವರ ಆದೇಶದಂತೆ ವಾರಾಣಸಿಯ ರಾಮಕೃಷ್ಣ ಅದ್ವೈತಾಶ್ರಮದಲ್ಲಿ ನಾವೆಲ್ಲರೂ ಸ್ವಾಮಿ ಅಂಬಿಕಾನಂದಜಿಯವರ ಮಾರ್ಗದರ್ಶನದಲ್ಲಿ ಕಾಲೀಕೀರ್ತನೆಯನ್ನು ಕಲಿತೆವು. ಒಂದು ದಿನ ಬೆಳಿಗ್ಗೆ ಕಾಲೀಕೀರ್ತನೆಯನ್ನು ಹಾಡುತ್ತಿದ್ದಾಗ ಸ್ವಾಮಿ ಬ್ರಹ್ಮಾನಂದಜಿ ನಮ್ಮೊಂದಿಗಿದ್ದರು. ಕೀರ್ತನೆ ಕೇಳುತ್ತಿದ್ದಂತೆ ಅವರು ಭಾವಾವಿಷ್ಟರಾದರು. ಶ್ರೀರಾಮಕೃಷ್ಣರ ಗರ್ಭಗೃಹದ ಬಾಗಿಲಿನೆದುರು ನರ್ತಿಸತೊಡಗಿದರು ಮತ್ತು ಶ್ರೀರಾಮಕೃಷ್ಣರಿಗೆ ಚಾಮರ ಬೀಸತೊಡಗಿದರು. ಅಂದು ಅವರು ಜಪಮಾಲೆಯನ್ನು ತಿರುಗಿಸಿ ಜಪ ಮಾಡುವುದನ್ನು ನಾನು ನೋಡಿದೆನು. ಅವರು ಜಪಮಣಿಗಳನ್ನು ತುಂಬ ನಿಧಾನವಾಗಿ, ಆಳವಾದ ಭಾವದೊಡನೆ ಕೇವಲ ೧೨ ಬಾರಿ ತಿರುಗಿಸಿದುದನ್ನು ನಾನು ಅಂದು ಕಂಡೆನು.

### ಸ್ವಾಮಿ ಮುಕ್ತೇಶ್ವರಾನಂದಜಿಯವರ ನೆನಪುಗಳು

ಸ್ವಾಮಿ ಬ್ರಹ್ಮಾನಂದಜಿಯವರು ನಮ್ಮನ್ನು ಸಾಧನೆಯಲ್ಲಿ ತೊಡಗುವಂತೆ, ಜಪ–ಧ್ಯಾನ ಮತ್ತು ಅಧ್ಯಯನ ಮಾಡುವಂತೆ ತುಂಬ ಹುರಿದುಂಬಿಸುತ್ತಿದ್ದರು. ತಮ್ಮ ಜೀವನದ ಕೊನೆಯವರೆಗೂ ಅವರು ಬೆಳಗ್ಗೆ ಮೂರು ಗಂಟೆಗೆ ಏಳುತ್ತಿದ್ದರು ಮತ್ತು ಧ್ಯಾನದಲ್ಲಿ ಲೀನರಾಗುತ್ತಿದ್ದರು. "ಸಾಧನೆ ಮಾಡಿ" ಎಂದು ಅವರು ನಮಗೆ ಮತ್ತೆ ಮತ್ತೆ ಹೇಳುತ್ತಿದ್ದರು. ಅವರು ಹೇಳುತ್ತಿದ್ದರು, "ಆಧ್ಯಾತ್ಮಿಕ ಜೀವನದ ಆರಂಭದ ಹಂತಗಳಲ್ಲಿ ಬಹಳ ಜಪ–ಧ್ಯಾನ ಮಾಡಬೇಕು. ನೀವು ಮನೆ–ಬಂಧುವರ್ಗವನ್ನು ಬಿಟ್ಟು ಬಂದಿದ್ದೀರಿ. ಈಗ ಇಲ್ಲಿ ಏನು ಮಾಡುತ್ತಿದ್ದೀರಿ? ಅವನ ಪಾವನ ನಾಮಸ್ಮರಣೆಯಲ್ಲಿ ಮುಳುಗಿ, ಅವನನ್ನು ಜ್ಞಾನ–ಭಕ್ತಿಗಾಗಿ ಪ್ರಾರ್ಥಿಸಿರಿ. ನೀವು ಇದನ್ನು ಈಗ ಮಾಡದಿದ್ದರೆ ಬಳಿಕ ಪರಿತಪಿಸಬೇಕಾಗುತ್ತದೆ."

ಅಂದು, ಇಡೀ ಬೇಲೂರು ಮಠವು ಜಪ, ಧ್ಯಾನ, ಅಧ್ಯಯನಗಳ ವಾತಾವರಣದಿಂದ ಅನುರಣಿತವಾಗಿರುತ್ತಿತ್ತು. ಆಗ ಮಠದಲ್ಲಿ ಸಾಧು–ಬ್ರಹ್ಮಚಾರಿಗಳು ಹೆಚ್ಚು ಇರಲಿಲ್ಲ. ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರನೇಕರು ಇದ್ದರು. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದರು. ಹಗಲು–ರಾತ್ರಿಯೂ ಭಕ್ತರಿಗೆ ಅನ್ನಪ್ರಸಾದವಿತ್ತು. ಆತಿಥ್ಯ ಮುಂದುವರಿಯುತ್ತಿತ್ತು. ಸ್ವಾಮಿ ಪ್ರೇಮಾನಂದಜಿಯವರು ಯಾವ ಭಕ್ತರಿಗೂ ಪ್ರಸಾದ ತೆಗೆದುಕೊಳ್ಳದೆ ಹೋಗಲು ಬಿಡುತ್ತಿರಲಿಲ್ಲ. ಅವರನ್ನು ನೋಡದಿದ್ದರೆ, ಇತರರಿಗೆ ಉಣಬಡಿಸುವುದರಲ್ಲಿ ಎಂತಹ ಆನಂದ ಮತ್ತು ತೃಪ್ತಿಯಿದೆ ಎಂಬ ಅರಿವು ನಮಗಾಗುತ್ತಿರಲಿಲ್ಲ. ಇದರ ಜೊತೆಗೆ ಅನೇಕ ಪರಿಶ್ರಮದ ಕೆಲಸಗಳನ್ನು ಮಾಡಬೇಕಾಗಿತ್ತು. ತರಕಾರಿ ತೋಟದಲ್ಲಿ, ಹೂದೋಟದಲ್ಲಿ ಬಿತ್ತನೆಯ ಕೆಲಸ, ಕಳೆ ಕೀಳುವುದು, ಗಂಗೆಯಿಂದ ಮಠಕ್ಕೆ ನೀರನ್ನು ಹೊತ್ತುಕೊಂಡು ತರುವುದು, ಅಡುಗೆಮನೆಯಲ್ಲಿ ತರಕಾರಿ ಹೆಚ್ಚಲು ಸಹಾಯ ಮಾಡುವುದು ಇತ್ಯಾದಿ. ನಾವೇನಾದರೂ ಸೋಮಾರಿಗಳಾದರೆ, ಹರಟುತ್ತಿದ್ದರೆ ಸ್ವಾಮಿ ಪ್ರೇಮಾನಂದಜಿಯವರು ಚೆನ್ನಾಗಿ ಗದರಿಸುತ್ತಿದ್ದರು. ಇವೆಲ್ಲದರೊಂದಿಗೆ ತಾವು ಹೇಳಿದ ಪ್ರಕಾರ ತಪ್ಪದೆ ಸಾಧನೆ ಮಾಡುತ್ತಿದ್ದೇವೆಯೇ ಎಂಬುದನ್ನು ಸ್ವಾಮಿ ಬ್ರಹ್ಮಾನಂದಜಿಯವರು ಎಚ್ಚರಿಕೆಯಿಂದ ಗಮನಿಸುತ್ತಿದ್ದರು.

೧೯೧೪ ನೇ ಇಸವಿ. ನಮ್ಮ ನಮ್ಮ ನಡುವೆ "ನಾನು ಹೆಚ್ಚು ಜಪ–ಧ್ಯಾನ ಮಾಡಬೇಕು" ಎಂಬ ಸ್ಪರ್ಧೆ ಇರುತ್ತಿತ್ತು. ಒಂದು ದಿನ ಸ್ವಾಮಿ ಬ್ರಹ್ಮಾನಂದಜಿಯವರು, ಸ್ವಾಮಿ 'ಬ' ಗೆ ಹೇಳಿದರು, "ನಾಳೆಯಿಂದ ನೀನು ಬೆಳಗ್ಗೆ ಮೂರು ಗಂಟೆಗೆ ಎದ್ದು ನನ್ನ ಪಕ್ಕದಲ್ಲಿ ಕುಳಿತು ಧ್ಯಾನಮಾಡಬೇಕು. ನೀನು ಎಷ್ಟು ಕಾಲ ಧ್ಯಾನ ಮಾಡುತ್ತೀಯೆಂದು ನಾನು ನೋಡಬೇಕು." ಅವರು ಹಾಗೆ ಹೇಳುವಾಗ ನಾವು ಹೆಚ್ಚಿನವರು ಅಲ್ಲಿದ್ದೆವು. ಎಲ್ಲ ಕಿರಿಯ ಸಂನ್ಯಾಸಿಗಳು ಸ್ವಾಮಿ ಚಿನ್ಮಯಾನಂದರ ನೇತೃತ್ವದಲ್ಲಿ ಸೇರಿಕೊಂಡು, ತಾವು ಕೂಡ ಪ್ರಾತಃಕಾಲ ಮೂರು ಗಂಟೆಗೆ ಎದ್ದು ಸ್ವಾಮಿ 'ಬ'ನ ಹಾಗೆ ಜಪ ಮಾಡುವುದಾಗಿ ತೀರ್ಮಾನಿಸಿದೆವು.

ಅದೆಂಥ ಅಪೂರ್ವ ಆನಂದವನ್ನು ನಾವು ಆ ದಿನಗಳಲ್ಲಿ ಅನುಭವಿಸಿದೆವು ಎಂಬುದನ್ನು ವಿವರಿಸಲಾಗದು. ನಾವು ಮೂರು ಗಂಟೆಗೆ ಮುಂಚೆಯೇ ಎದ್ದು, ಮೊದಲ ಮಾಳಿಗೆಯ ವರಾಂಡದಲ್ಲಿ, ಸ್ವಾಮಿ ಬ್ರಹ್ಮಾನಂದಜಿಯವರ ಕೋಣೆಯ ಹೊರಗಡೆ ಗಂಗೆಗೆ ಮುಖಮಾಡಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದೆವು. ಸ್ವಾಮಿ ಬ್ರಹ್ಮಾನಂದಜಿಯವರು ಕೋಣೆಯಿಂದ ಹೊರಬರುವ ಮುಂಚೆಯೇ ನಾವು ಸಿದ್ಧರಾಗಿ ಕುಳಿತಿರುತ್ತಿದ್ದೆವು. ಅವರು ಕೋಣೆಯಿಂದ ಹೊರಬಂದು ಯಾರು ಯಾರು ಬಂದಿದ್ದಾರೆ ಎಂಬುದನ್ನು ಒಮ್ಮೆ ಗಮನಿಸಿ, ಎಲ್ಲರನ್ನೂ ಹರಸಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ದಿನದಿನವೂ ಯಾವುದೋ ಒಂದು ವಿಶೇಷ ಶಕ್ತಿಯಿಂದ ಕೂಡಿದವರಾಗಿ, ಆಧ್ಯಾತ್ಮಿಕ ಸ್ಫೂರ್ತಿಯಿಂದ ಧ್ಯಾನವನ್ನು ಮುಂದುವರಿಸಿದೆವು. ಇದರಿಂದ ಅನಂತ ಆನಂದವನ್ನು

ಅನುಭವಿಸಿದೆವು. ನಿಜವಾಗಿಯೂ ಭಗವದನುಭವವನ್ನು ನಾವು ಪಡೆಯಬಲ್ಲೆವು ಎಂಬ ಭಾವನೆ, ಧೈರ್ಯ ಅಂದು ನಮ್ಮಲ್ಲಿ ಉದಿಸಿತು. ಹಗಲಿರುಳೂ ನಮ್ಮ ನಡುವೆ ಭಗವತ್‌ಸಂಬಂಧವಾದ ಮಾತುಕತೆಗಳೇ ನಡೆಯುತ್ತಿದ್ದವು. ಬೇರೆ ಮಾತುಗಳೇ ಇರುತ್ತಿರಲಿಲ್ಲ. ಕೇವಲ ಜ್ಞಾನ–ಭಕ್ತಿ–ತ್ಯಾಗಗಳ ಕುರಿತಾದ ಮಾತುಗಳು. ಹೀಗೆ ದಿನಗಳು ಉರುಳುತ್ತಿದ್ದುದೇ ಗೊತ್ತಾಗಲಿಲ್ಲ. ನಮ್ಮಲ್ಲಿ ಕೆಲವರಿಗೆ ಆ ದಿನಗಳಲ್ಲಿ ಆಳವಾದ ಆಧ್ಯಾತ್ಮಿಕ ಅನುಭವಗಳಾದವು.

ಇನ್ನೂ ನಸುಕು ಹರಿದಿಲ್ಲ. ಆಳವಾದ ಪ್ರಶಾಂತತೆ ಎಲ್ಲೆಡೆ ವ್ಯಾಪಿಸಿಕೊಂಡಿದೆ. ಸಮಸ್ತ ಪ್ರಕೃತಿಯೇ ಬ್ರಹ್ಮಧ್ಯಾನದಲ್ಲಿ ಲೀನವಾಗಿ, ಬ್ರಹ್ಮರಸದಲ್ಲಿ ಮತ್ತವಾಗಿರುವಂತೆ ಭಾಸವಾಗುತ್ತಿದೆ. ಧ್ಯಾನ ಮುಗಿದ ಮೇಲೆ ಬ್ರಹ್ಮಭಾವವನ್ನು ಉದ್ದೀಪನಗೊಳಿಸುವ ಭಜನೆಗಳನ್ನು ನಾವು ಹೆಚ್ಚಾಗಿ ಹಾಡುತ್ತಿದ್ದೆವು. ಸ್ವಾಮಿ ಬ್ರಹ್ಮಾನಂದಜಿಯವರು ಈ ಭಜನೆಯನ್ನು ಹಾಡುವಂತೆ ಹೇಳಿದರು.

**ಅಲ್ಲಿ ನೋಡಿರಿ ಆನಂದಧಾಮ**
**ಅತಿ ಸುಂದರ, ದೀಪ್ತ, ದಿವ್ಯ ಇಹುದದು**
**ಭವಸಾಗರದ ಆಚೆ**

ಭಜನೆಯ ಈ ಸಾಲನ್ನು ಉತ್ಸಾಹದಿಂದ ಹಾಡಿದಾಗ, ಸ್ವಾಮಿ ಬ್ರಹ್ಮಾನಂದಜಿಯವರ ಆಧ್ಯಾತ್ಮಿಕ ಭಾವದಿಂದ ನಾವು ಸ್ಫೂರ್ತಿ ಸಿಂಚಿತರಾಗುತ್ತಿದ್ದೆವು. ನಮ್ಮ ಭಾವದೀಪ್ತ ದನಿಗಳು ಸುತ್ತಲ ಮೌನದಲ್ಲಿ ಪ್ರತಿಧ್ವನಿಸುತ್ತಿದ್ದುವು; ಒಳ–ಹೊರಗಿನ ಸಮಸ್ತ ಪರಿಸರವನ್ನೂ ಪವಿತ್ರಗೊಳಿಸುತ್ತಿದ್ದವು; ಆನಂದೋತ್ಕರ್ಷದ ಬೇರೆಯೇ ಲೋಕಕ್ಕೆ ನಮ್ಮನ್ನು ಕರೆದೊಯ್ಯುತ್ತಿದ್ದವು.

ಅವೇ ಹಾಡುಗಳನ್ನು ನಾವು ಇಂದಿಗೂ ಹಾಡುತ್ತೇವೆ. ಆದರೆ ಆ ಹೃದಯಸ್ಪರ್ಶಿತ್ವ, ಆನಂದೋತ್ಕರ್ಷ – ಸ್ವಾಮಿ ಬ್ರಹ್ಮಾನಂದಜಿಯವರ ಸನ್ನಿಧಿಯಲ್ಲಿ ಹಾಡಿದಾಗ ದೊರೆಯುತ್ತಿದ್ದುದು, ಈಗ ದೊರಕುವುದಿಲ್ಲ.

**ಹೃದಯಪದ್ಮದಲ್ಲಿ ವಿರಾಜಿಸುವ ಅವನ ಪಾದಪದ್ಮಗಳನ್ನು ಧ್ಯಾನಿಸು. ಅವನ ಅತುಲ ಸೌಂದರ್ಯರಾಶಿಯನ್ನು ನಿನ್ನ ಪ್ರೇಮಚಕ್ಷುಗಳಲ್ಲಿ ಸೆರೆಹಿಡಿ.**

– ಈ ಭಜನೆಯನ್ನು ಹಾಡುವಾಗಲೆಲ್ಲ, ಸತ್ಯವಾಗಿ ಹೇಳಬೇಕೆಂದರೆ, ನನ್ನ ಹೃದಯಪದ್ಮ ಬರಿದಾಗಿರುತ್ತಿತ್ತು. ಆಗ ಕಣ್ತೆರೆದು ಸ್ವಾಮಿ ಬ್ರಹ್ಮಾನಂದಜಿಯವರ ಪ್ರದೀಪ್ತ ಮುಖವನ್ನು, ಅಲ್ಲಿ ಉಂಟಾದ ಅದ್ಭುತ ಪರಿವರ್ತನೆಯನ್ನು ಕಂಡು ನಾನು ಬೆರಗಾಗುತ್ತಿದ್ದೆನು. ಅವರ ಮುಖ ದೈವೀಪ್ರಕಾಶದಿಂದ ಬೆಳಗುತ್ತಿತ್ತು. ದೃಷ್ಟಿ ಅಂತರ್ಮುಖವಾಗಿತ್ತು, ಸ್ಥಿರವಾಗಿತ್ತು. ನಯನಗಳು ಮುಚ್ಚಿರುತ್ತಿದ್ದವು. ತಮ್ಮ ಹೃದಯಾಂತರಾಳದಲ್ಲಿ ಅವರು ತಮ್ಮ ಪ್ರಿಯತಮನನ್ನು ಕಾಣುತ್ತಿದ್ದರು. ಆ ಶಾಂತ–ನಿರಾಳ ಮುಖಮುದ್ರೆಯಿಂದ ನನ್ನ ದೃಷ್ಟಿಯನ್ನು ಕದಲಿಸಲು ನನಗೆ ಆಗುತ್ತಿರಲಿಲ್ಲ.

ಸ್ವಾಮಿ ಬ್ರಹ್ಮಾನಂದಜಿಯವರು ಹಾಗೂ ಸ್ವಾಮಿ ಪ್ರೇಮಾನಂದಜಿಯವರು ಪೂರ್ವ ಬಂಗಾಳದ ಮೈಮನ್‌ಸಿಂಗ್ ಎಂಬ ಊರಿನ ಶ್ರೀ ಜತಿಂದ್ರ ದತ್ತ ಎಂಬ ಭಕ್ತನ ಶ್ರದ್ಧೆಯಿಂದ ಸುಪ್ರೀತರಾಗಿ ಅವನ ಮನೆಯಲ್ಲಿ ಐದು ದಿನ ಉಳಿದುಕೊಂಡಿದ್ದರು. ಅಲ್ಲಿನ ಮಹಾಕಾಳಿ ಪಾಠಶಾಲೆಯ ಗ್ರಂಥಾಲಯದ ಕಟ್ಟಡದ ಉದ್ಘಾಟನೆಗೆ ಸ್ವಾಮಿಗಳನ್ನು ಜನರು ಪ್ರಾರ್ಥಿಸಿಕೊಂಡರು. ಸ್ವಾಮಿಗಳು ಸಂತೋಷದಿಂದ ಒಪ್ಪಿ ಕೆಲವು ಭಕ್ತರು ಹಾಗೂ ಸಂನ್ಯಾಸಿಗಳೊಂದಿಗೆ ಅಲ್ಲಿಗೆ ಹೋದರು.

ಕೋಣೆಯಲ್ಲಿ ಸುಂದರವಾಗಿ ಅಲಂಕೃತವಾದ ವೇದಿಕೆಯ ಮೇಲೆ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಚಿತ್ರಗಳನ್ನು ಇರಿಸಲಾಗಿತ್ತು. ಪೂಜಾವೇದಿಕೆಯನ್ನು ನೋಡಿ ಸ್ವಾಮಿ ಬ್ರಹ್ಮಾನಂದರು ಸಂತಸದಿಂದ ಸ್ವಾಮಿ ಪ್ರೇಮಾನಂದರಿಗೆ, "ನೋಡಿದೆಯಾ, ಶ್ರೀರಾಮಕೃಷ್ಣರು ಅಲ್ಲಿ ಕುಳಿತಿದ್ದಾರೆ. ನಾನು ಆರತಿ ಮಾಡುತ್ತೇನೆ" ಎಂದು ಹೇಳಿದರು. ಇದನ್ನು ಕೇಳಿ ಮೈಮನ್‌ಸಿಂಗ್‌ನ ಭಕ್ತರು ಗ್ರಂಥಾಲಯವನ್ನು ಕಟ್ಟುವಲ್ಲಿನ ತಮ್ಮ ಧನ, ಪರಿಶ್ರಮ ಮತ್ತು ಭಕ್ತಿಭಾವಗಳು ಸಾರ್ಥಕವಾಯಿತೆಂದು ಭಾವಿಸಿದರು.

ಸ್ವಾಮಿ ಬ್ರಹ್ಮಾನಂದರು ಧ್ಯಾನದೊಂದಿಗೆ ಪೂಜೆಯನ್ನು ಆರಂಭಿಸಿದರು. ದೇವರ ಪದತಲದಲ್ಲಿ ಪುಷ್ಪಗಳನ್ನು ಅರ್ಪಿಸಿದರು. ಗಂಟೆಯ ನಿನಾದದೊಂದಿಗೆ ಪಂಚಾರತಿಯನ್ನು ಬೆಳಗತೊಡಗಿದರು. ಆ ಗಂಭೀರ, ಮಧುರ ಘಂಟಾನಾದ ಕೋಣೆಯಲ್ಲೆಲ್ಲ ಆಧ್ಯಾತ್ಮಿಕ ಸ್ಪಂದನಗಳನ್ನು ಜಾಗೃತಗೊಳಿಸಿತು. ಸ್ವಾಮಿ ಪ್ರೇಮಾನಂದರು ಭಾವವಿಹ್ವಲಿತರಾಗಿ ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿ ನರ್ತಿಸಲಾರಂಭಿಸಿದರು. ಅವರ ಭಾವದಿಂದ ಪ್ರೇರಿತರಾಗಿ ಇತರ ಭಕ್ತರಿಗೂ ಹಾಗೆಯೇ ನರ್ತಿಸಬೇಕೆನ್ನಿಸಿತು. ಅವರೆಲ್ಲ ತಮಗೇ ಅರಿವಿಲ್ಲದೆ ನರ್ತನ ಭಂಗಿಯಲ್ಲಿ ಕೈಗಳನ್ನು ಮೇಲೆತ್ತಿ ಕುಳಿತಲ್ಲಿಂದಲೇ ಸ್ಪಂದಿಸಿದರು.

ಒಮ್ಮೆ ಗೋಕುಲದಾಸ ಡೇ ಎಂಬ ಭಕ್ತ ಸ್ವಾಮಿ ಬ್ರಹ್ಮಾನಂದಜಿಯವರನ್ನು ಕೇಳಿದ, "ಮಹಾರಾಜ್, ಮನುಷ್ಯರ ಕರ್ತವ್ಯವೇನು ? ಸ್ವಾಮಿ ಬ್ರಹ್ಮಾನಂದಜಿಯವರು ಒಂದು ಭಜನೆಯ ಪಲ್ಲವಿಯನ್ನು ಮಧುರವಾಗಿ ಉದ್ಧರಿಸುತ್ತ ಹೇಳಿದರು–

**"ಓ ನನ್ನ ಮನವೆ, ಪ್ರಭುವಿನ ಪಾವನ ನಾಮವನ್ನು**
**ಜಪಿಸು ಅನವರತ."**

**ನಿನ್ನ ಬಾಳಿನ ಹೊಲವು ಪಾಳುಬಿದ್ದಿದೆಯಲ್ಲೋ**
**ಕೃಷಿಗೈಯಲೂ ಕೂಡ ತಿಳಿಯದಿರುವೆ**
**ಎಂಥ ಹೊನ್ನನು ಬೆಳೆದು ತೆಗೆಯಬಹುದಾಗಿತ್ತು**
**ಕ್ಷಣಕಾಲ ಮೈಮುರಿದು ದುಡಿದಿದ್ದರೆ**
**– ರಾಮಪ್ರಸಾದ**